ಅಧ್ಯಕ್ಷರು:– ಈ ದಿವಸ ದಿನಾಂಕ: 07.07.2015 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಮಾನ್ಯ ಸದಸ್ಯರಾದ ಶ್ರೀ ಬಿ.ಎನ್. ವಿಜಯಕುಮಾರ್ ಇವರಿಗೆ ಜನ್ಮದಿನದ ಶುಭಾಶಯಗಳು. ಭಗವಂತನು ತಮಗೆ ಆರೋಗ್ಯ, ಐಶ್ವರ್ಯಗಳನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ. ಈಗ ಮಾನ್ಯ ವಿರೊಧ ಪಕ್ಷದ ನಾಯಕರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೀರಿ..

1. ನಿಲುವಳಿ ಸೂಚನೆ

(ಮಂಡನೆಗೆ ಅನುಮತಿ ಕೋರಿ ಚರ್ಚೆ)

ವಿಷಯ : ಶ್ರೀ ಬಾಬುರಾವ್ ಚಿಂಚನಸೂರ್, ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಇವರು ನೀಡಿರುವ ಚೆಕ್ ಬೌನ್ಸ್ ಆಗಿರುವ ಬಗ್ಗೆ.

– – –

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ಒಂದು ನಿಲುವಳಿ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಸಚಿವರಾದಂಥ ಶ್ರೀ ಬಾಬುರಾವ್ ಚಿಂಚನಸೂರ್‌ರವರ ಬಗ್ಗೆ ಇವತ್ತೇನು ಪತ್ರಿಕೆಯಲ್ಲಿ ಪ್ರಕಟವಾಗಿದೆ. ನಿನ್ನೆ ದಿವಸ ಟಿವಿಯಲ್ಲಿ ಪ್ರಸಾರವಾಗಿದೆ, ಅದರ ಬಗ್ಗೆ ಕೆಲವು copies ನನ್ನ ಕಡೆ ಬಂದಿವೆ. ಇವತ್ತು ಒಬ್ಬ ಸಚಿವರಾದಂಥವರು, ಸಾರ್ವಜನಿಕ ರಂಗದಲ್ಲಿರುವಂಥ ವ್ಯಕ್ತಿ ಅವರು ಯಾರೊಂದಿಗೋ ವ್ಯವಹಾರ ಮಾಡಿಕೊಂಡಿರಬಹುದು, ಆ ವ್ಯವಹಾರದಲ್ಲಿ repayment ಮಾಡುವ ಸಲುವಾಗಿ 11.00 ಕೋಟಿ ರೂಪಾಯಿಗಳ ಚೆಕ್ ಕೊಟ್ಟಿದ್ದು, ಆ ಚೆಕ್ bounce ಆಗಿದೆ. ಅದು ಎಲ್ಲಿಯವರೆಗೆ ಹೋಗಿದೆ ಎಂದರೆ, ಅದು Metropolitan Magistrate Court ಗೆ ಹೋಗಿ Minister ವಿರುದ್ಧ complaint file ಆಗಿದೆ. ಅಲ್ಲಿ Magistrate ನವರು ಇದರ cognizance ತೆಗೆದುಕೊಳ್ಳಬೇಕೆಂದು ತಿಳಿಸಿ investigation ಮಾಡಲಿಕ್ಕೂ

order ಮಾಡಿದ್ದಾರೆ. ಜುಲೈ 15 ನೇ ತಾರಿಖು ಈ ಪ್ರಕರಣದ next hearing ಇದೆ. ಇದರ ಬಗ್ಗೆ ನಾನು detail ಆಗಿ ಮಾತನಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಇಂಥ ವಿಚಾರಗಳನ್ನೆಲ್ಲ Adjournment Motion ನಲ್ಲಿ ಪ್ರಸ್ತಾಪ ಮಾಡುತ್ತೀರಿ ಎಂದರೆ ..

ಶ್ರೀ ಜಗದೀಶ್ ಶೆಟ್ಟರ್:– ಏಕೆ ಪ್ರಸ್ತಾಪ ಮಾಡಬಾರದು ಅಧ್ಯಕ್ಷರೆ? ಒಬ್ಬರು ಸಚಿವರಿಗೆ ಸಂಬಂಧಿಸಿದ್ದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಅವರ secretary ಮೂಲಕ ಆ ಹೆಣ್ಣುಮಗಳು complaint ಕೊಟ್ಟಿದ್ದಾರೆ. ಇವತ್ತು case fight ಮಾಡುತ್ತಿದ್ದಾರೆ. ಇಲ್ಲಿ ಚೆಕ್ bounce ಆಗಿದೆ. ಹಾಗಾಗಿ ಇವತ್ತು ಅವರಿಗೆ threat ಕೊಡುವಂಥದ್ದು, ಬೆದರಿಕೆ ಹಾಕುವಂಥದ್ದು...

ಅಧ್ಯಕ್ಷರು:– 11.00 ಕೋಟಿ ರೂಪಾಯಿಗಳ ಚೆಕ್ ಕೊಟ್ಟಿರಬೇಕೆಂದರೆ ಅವಳು ಎಂಥವಳು?

(ಗೊಂದಲ)

ಶ್ರೀ ಸಿ.ಟಿ. ರವಿ:– ನೋಡಿ, ನಿಮಗೆ, ನಮಗೆ ಕೊಡುವುದಿಲ್ಲ. ಅಂಥವರಿಗೆ ಕೊಡುವುದು.

ಶ್ರೀ ಜಗದೀಶ್ ಶೆಟ್ಟರ್:– ನೋಡಿ, ಬಾಬುರಾವ್ ಚಿಂಚನಸೂರ್ ಅವರು 11.00 ಕೋಟಿ ರೂಪಾಯಿಗಳಿಗೆ ಚೆಕ್ ಬರೆದುಕೊಟ್ಟಿದ್ದಾರೆ. ಅವರು ಸಚಿವರ ಸ್ಥಾನದಲ್ಲಿರುವವರು, ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿ ಮಾಡುವುದಾದರೆ...

ಶ್ರೀ ಟಿ.ಬಿ. ಜಯಚಂದ್ರ:– ಅಧ್ಯಕ್ಷರೆ, ಇದು civil in nature. ಯಾವಾಗ ಕೊಟ್ಟರು, ಏನು ಕಥೆ?

ಶ್ರೀ ಜಗದೀಶ್ ಶೆಟ್ಟರ್:– Civil in nature ಅಲ್ಲ ಅಧ್ಯಕ್ಷರೆ, ಇವತ್ತು ಆ Secretary ಗೆ threat ಮಾಡುತ್ತಿದ್ದಾರೆ ಮತ್ತು, ನಿನಗೆ ಯಾವುದೋ ಒಂದು post ಕೊಡುತ್ತೇವೆಂದು ಆಮಿಷ ತೋರಿಸುತ್ತಿದ್ದಾರೆ. ಈ ಸರ್ಕಾರದಲ್ಲಿ Director post, ನಿಗಮ ಮಂಡಳಿಯ posts ಎಲ್ಲಾ ಮಾರಾಟಕ್ಕಿವೆ.

ಶ್ರೀ ಕೆ. ಷಡಕ್ಷರಿ:– ಲಿಖಿತ ಮೂಲಕ ಅವರು ದೂರು ಕೊಟ್ಟಿದ್ದಾರೆಯೇ?

ಶ್ರೀ ಟಿ.ಬಿ. ಜಯಚಂದ್ರ:– ಇವೆಲ್ಲ ಬೇಡ ಅಧ್ಯಕ್ಷರೆ, ಚರ್ಚೆ ಯಾವ ಕಡೆಗೋ ಹೋಗುತ್ತಿದೆ.

ಅಧ್ಯಕ್ಷರು:– ಅದಕ್ಕೆಲ್ಲ ದಾಖಲೆಗಳಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, open ಆಗಿ audio ದಲ್ಲಿ ಬಂದಿದೆ. ಅಲ್ಲಿ ಮಾತನಾಡಿರುವುದೇ ಬಂದಿದೆ.

ಶ್ರೀ ಕೆ. ಷಡಕ್ಷರಿ:– ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಇಂಥ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದರೆ ಹೇಗೆ? ಅದು ಅವರ ವೈಯಕ್ತಿಕ ವ್ಯವಹಾರವಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– 15.00 ಲಕ್ಷ ರೂಪಾಯಿಗಳನ್ನು ಕೊಡು ಎಂದು ಕೇಳುತ್ತಾರೆ. ಆ ಚೆಕ್ ವಾಪಸ್ ಕೊಡಬೇಕು. ನೀನು ಮುಂದೆ ಹೋಗಬೇಡ, case file ಮಾಡಬೇಡ, ಇದರಿಂದ ಒಳ್ಳೆಯದಾಗುವುದಿಲ್ಲ ಎಂದಿದ್ದಾರೆ. ಹಾಗಾಗಿ ನಾನು ಇದರ ಬಗ್ಗೆ detail ಆಗಿ ಚರ್ಚೆ ಮಾಡಬೇಕು. ನನಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಯಾವುದಾದರೊಂದು time ನಿಗದಿ ಮಾಡಿ ಚರ್ಚೆಗೆ ಅವಕಾಶ ಕೊಡಿ. ಏಕೆಂದರೆ ಒಬ್ಬ ಮಂತ್ರಿ ಈ ರೀತಿ ಸಾರ್ವಜನಿಕ ರಂಗದಲ್ಲಿ criminal case face ಮಾಡುತ್ತಿದ್ದಾರೆ. ಈಗಾಗಲೇ Magistrate

ಎಲ್ಲಾ ರೀತಿಯ enquiry ಮಾಡಲಿಕ್ಕೆ order ಮಾಡಿದ್ದಾರೆ. ಇಂಥವರು ಸಚಿವರಾಗಿ ಮುಂದುವರೆಯಲಿಕ್ಕೆ ಅವರಿಗೆ ಹಕ್ಕಿಲ್ಲ ಅಧ್ಯಕ್ಷರೆ, ಇದು ಸಾರ್ವಜನಿಕರಿಗೆ ಮೋಸ ಮಾಡುವಂಥದ್ದು. ಏಕೆಂದರೆ ಅವರ ಮೇಲೆ 420 case ಎಲ್ಲ ದಾಖಲಾಗಿದೆ. ಅಂಥವರನ್ನು ಮಂತ್ರಿ ಪದವಿಯಲ್ಲಿ ಹೇಗೆ ಮುಂದುವರೆಯಲಿಕ್ಕೆ ಬಿಡುತ್ತೀರಿ? ಅವರು ರಾಜೀನಾಮೆ ಕೊಡಬೇಕು, ಮುಖ್ಯಮಂತ್ರಿಯವರು ಅವರನ್ನು ಸಂಪುಟದಿಂದ ಕೈಬಿಡಬೇಕು.

ಅಧ್ಯಕ್ಷರು:– ಆಯಿತು, ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– Adjournment Motion ನಲ್ಲಿ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಇದನ್ನು reject ಮಾಡಬೇಕು ಅಷ್ಟೇ.

ಶ್ರೀ ಕೆ. ಶಿವಮೂರ್ತಿ:– ಯಾರ್ಯಾರ ಹತ್ತಿರ ಎಷ್ಟೆಷ್ಟು ದುಡ್ಡಿದೆ? ಎಂಬ ಬಗ್ಗೆ ಚರ್ಚೆಯಾಗಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾವು ಈ ಬಗ್ಗೆ ಚರ್ಚೆ ಮಾಡುತ್ತೇವೆ ಅಧ್ಯಕ್ಷರೆ, ಇದು ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ ಇದಕ್ಕೊಂದು time ನಿಗದಿ ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಡಿ. ಮಧ್ಯಾಹ್ನ 3.00 ಗಂಟೆಗೆ ತಾವು ಸಮಯ ನಿಗದಿ ಮಾಡಿಕೊಡಿ.

(ಗೊಂದಲ)

ಶ್ರೀ ಕೆ. ಷಡಕ್ಷರಿ:– ಅಧ್ಯಕ್ಷರೆ ಮೊನ್ನೆ ಪತ್ರಿಕೆಯಲ್ಲಿ ನೋಡಿದೆ, ಲೋಕಾಯುಕ್ತರವರನ್ನು ನೇಮಕ ಮಾಡಬೇಕಾದರೆ 10.00 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದೆಲ್ಲ ಸತ್ಯವೇ?

(ಗೊಂದಲ)

ಅಧ್ಯಕ್ಷರು:– ಆಯಿತು. ಖಾದರ್‌ರವರು ಒಂದು ಹೇಳಿಕೆಯನ್ನು ಕೊಡುತ್ತಾರೆ, ಹೇಳಿ.

2. ಮಾನ್ಯ ಸಚಿವರ ಹೇಳಿಕೆ

ವಿಷಯ: ಸರ್ಕಾರಿ ವೈದ್ಯರುಗಳ ವೇತನ ಹೆಚ್ಚಳದ ಬಗ್ಗೆ

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಾರ್ವಜನಿಕ ಆಸ್ಪತ್ರೆ, ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುವಂಥ ವೈದ್ಯರು, ವೈದ್ಯಾಧಿಕಾರಿ ಹಾಗೂ ದಂತ ಆರೋಗ್ಯಾಧಿಕಾರಿಗಳಿಗೆ ವೇತನ ಜಾಸ್ತಿ ಮಾಡುವ ಬಗ್ಗೆ ಬಹಳ ದಿನಗಳಿಂದ ಬೇಡಿಕೆ ಇತ್ತು. ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆದೇಶ ಕೊಟ್ಟು ಸರ್ಕಾರ ಕೂಡ ಇವತ್ತು ಆದೇಶ ಹೊರಡಿಸಿದೆ. ಈ ಕೆಳಕಂಡಂತೆ ಅವರ ವೇತನವನ್ನು ಜಾಸ್ತಿ ಮಾಡಿರುವುದರ ಬಗ್ಗೆ ಹೇಳಬಯಸುತ್ತೇನೆ.

ಪ್ರಥಮವಾಗಿ ಸೇರುವಂಥ MBBS doctors ಯಾರಿದ್ದಾರೆ, ಅವರಿಗೆ 54,989 ರೂ. ಗಳಿಂದ 59,989–00 ರೂಪಾಯಿಗಳಿಗೆ ವೇತನ ಜಾಸ್ತಿ ಮಾಡಲಾಗಿದೆ; 06 ವರ್ಷಗಳಿಂದ 13 ವರ್ಷಗಳವರೆಗೆ ಸೇವೆ ಸಲ್ಲಿಸಿರುವ ಹಿರಿಯ ವೈದ್ಯಾಧಿಕಾರಿಗಳಿಗೆ 68,620–00 ರೂ. ಗಳು; 13 ವರ್ಷಗಳ ಮೇಲ್ಪಟ್ಟ ಸೇವೆ ಸಲ್ಲಿಸಿದ MBBS ವೈದ್ಯರಿಗೆ 78,569–00 ರೂ. ಗಳು; 20 ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿರುವ ವೈದ್ಯರಿಗೆ 92,649–00 ರೂ. ಗಳಿಗೆ ವೇತನ ಜಾಸ್ತಿ ಆಗಿದೆ. ಅದೇ ರೀತಿ ನಮ್ಮ PG doctor, ತಜ್ಞ ವೈದ್ಯರು ಯಾರಿದ್ದಾರೆ ಅವರಿಗೆ ಹಿಂದೆ 59,780–00 ರೂ. ಗಳು ಇತ್ತು, ಅದನ್ನು ಈಗ ತಜ್ಞ ವೈದ್ಯರು ಬರಬೇಕೆಂಬ ಉದ್ದೇಶದಿಂದ 84,780–00 ರೂ. ಗಳು ಎಂದು ಮಾಡಿದ್ದೇವೆ. 6 ವರ್ಷಗಳಿಗೂ ಮೇಲ್ಪಟ್ಟ ತಜ್ಞ ವೈದ್ಯರಿಗೆ 95,166–00 ರೂ. ಗಳು ಹಿರಿಯ ತಜ್ಞ ವೈದ್ಯರಿಗೆ 1,12,919–00 ರೂ. ಗಳು ಎಂದು ಮಾಡಿದ್ದೇವೆ. ಅದೇ ರೀತಿ ಸೂಪರ್ ಸ್ಪೆಷಲಿಸ್ಟ್ ವೈದ್ಯರು